**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**
**ಸಿ ಸಿ ನಂಃ 786/24**

ಸಾಕ್ಷಿಯ ಹೆಸರುಃ ರಘು
ತಂದೆ /ಗಂಡನ ಹೆಸರು ಃ ಮಲ್ಲೇಶ ಚಾಸಾ3
ವಯಸ್ಸು ಃ **27** ಪ್ರಾಸಾ1
ಉದ್ಯೋಗ ಃ ಚಾಲಕ
ವಾಸ ಸ್ಥಳ ಃ ಗೋಂದಿಬಸವನಹಳ್ಳಿ ಗ್ರಾಮ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 05.06.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ದಿಃ **23.01.2024** ರಂದು ನಾನು ಮತ್ತು ಚಾಸಾ **4** ಮತ್ತು ಚಾಸಾ **1** ರವರು ಗಂಧದಕೋಟೆ ಗ್ರೀನ್ ನರ್ಸರಿ ಬಳಿ ಬೈಕಿನಲ್ಲಿ ಬರುವಾಗ ದಿಃ **21.01.2024** ರಂದು ಅಪಘಾತವಾಗಿದ್ದು ಸಂಚಾರ ಪೋಲಿಸ್‌ರವರು ಮಹಜರಗೆ ಸಹಕರಿಸಿ ಎಂದು ನಮ್ಮನ್ನು ಕೇಳಿಕೊಂಡ ಮೇರೆಗೆ ನಾವು ಒಪ್ಪಿಕೊಂಡು ಹೋಗಿರುತ್ತೇವೆ. ನನ್ನ ಸಮಕ್ಷಮ ಮಹಜರ ಕ್ರಮ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಚಾಸಾ **1** ಮತ್ತು ಚಾಸಾ **4** ರವರು ಹಾಜರಿದ್ದರು. ಮಹಜರ ಕ್ರಮವನ್ನು ಸುಮಾರು **11.30** ಗಂಟೆ ಸಮಯದಿಂದ **12.30** ಗಂಟೆ ಸಮಯದವರೆಗೆ ಗಂಧದ ಕೋಟೆ ಗ್ರೀನ್ ನರ್ಸರಿ ಬಳಿ ಜರುಗಿಸಿರುತ್ತಾರೆ. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿ **1**ಎ ಎಂದು ಗುರುತಿಸಲಾಯಿತು. ನಂತರ ಅಲ್ಲಿಂದ ಕುಶಾಲನಗರ ಗ್ರಾಮಾಂತರ ಪೋಲಿಸ ಠಾಣೆಗೆ ನಾನು , ಚಾಸಾ **1** ಮತ್ತು **4** ರವರು ಹೋಗಿರುತ್ತೇವೆ. ಪೋಲಿಸ್ ಠಾಣೆಗೆ ಹೋದ ಮೇಲೆ ಅಲ್ಲಿ ಒಂದು ಸ್ಪೆಂಡರ್ ಬೈಕ್ ಕೆ ಎ **12** ಆರ್ **0318** ಮತ್ತು ಇನೋವಾ ಕಾರ್ ಕೆ ಎ **05** ಎ ಹೆಚ್ **7929** ಇರುತ್ತದೆ. ಸದರಿ ವಾಹನಗಳನ್ನು

ಚಾಸಾ **1** ರವರು ಪೋಲಿಸರಿಗೆ ತೋರಿಸಿ ಅದರಲ್ಲಿ ಇನೋವಾ ಕಾರ ಅಪಘಾತ ಪಡಿಸಿದ ವಾಹನ ಎಂದು ತೋರಿಸಿರುತ್ತಾರೆ. ನಂತರ ಪೋಲಿಸರು ಎರಡು ವಾಹನಗಳನ್ನು ಅಮಾನತ್ತು ಮಹಜರ ಮಾಡಿ ವಶಪಡಿಸಿಕೊಂಡಿರುತ್ತಾರೆ. ಸದರಿ ಅಮಾನತು ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಅಮಾನತು ಪಂಚಾನಮೆಯನ್ನು **1.00** ಗಂಟೆ ಯಿಂದ **2.00** ಗಂಟೆವರೆಗೆ ಜರುಗಿಸಿರುತ್ತಾರೆ. ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿ **2** ಎ ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ ಸಿ ಎಸ್ ವಕೀಲರಿಂದ**

ನಾನು ಚಾಲಕನಾಗಿ ಕೆಲಸ ಮಾಡುತ್ತೇನೆ. ಮಹಜರ ಮಾಡಿದ ದಿನ ನಾನು ಚಾಲಕನ ಕೆಲಸಕ್ಕೆ ಹೋಗಿರುವುದಿಲ್ಲ. ಮಹಜರ ಮಾಡುವ ವಿಚಾರಕ್ಕಾಗಿ ನಾನು ಗಂಧದಕೋಟೆ ಬಳಿ ಹೋಗಿರುವುದಿಲ್ಲ. ನಾನು ಹೋಗುವ ಮೊದಲೇ ಗಂಧದಕೋಟೆಯ ಬಳಿ ಪೋಲಿಸರು ಇದ್ದರು. ಗಂಧದಕೋಟೆ ಬಳಿ ಮನೆಗಳು ಹಾಗೂ ನರ್ಸರಿ ಸಹ ಇರುತ್ತದೆ. ನಾನು ಹೋದಾಗ ಸ್ಥಳದಲ್ಲಿ ಸುಮಾರು **4-5** ಜನ ಇದ್ದರು. ಚಾಸಾ **1** ರವರು ನನಗೆ ಪರಿಚಯ ಇರುವುದಿಲ್ಲ. ಚಾಸಾ **1** ರವರು ಮೊದಲೇ ಕೃತ್ಯ ನಡೆದ ಸ್ಥಳದ ಬಳಿ ಇದ್ದರು. ನಾನು ಕೃತ್ಯ ನಡೆದ ಸ್ಥಳದಲ್ಲಿ ಬೈಕ್ ಹುಜ್ಜಿಕೊಂಡ ಕುರುಹು ಮತ್ತು ಬೈಕಿನ ಇಂಡೀಕೇಟರ್ ಬಿದ್ದಿರುವುದನ್ನು ಗಮನಿಸಿರುತ್ತೇನೆ. ಸದರಿ ವಿಚಾರವನ್ನು ಪೋಲಿಸರು ನಿಪಿ **1** ರಲ್ಲಿ ಕಾಣಿಸಿರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ. ಹುಜ್ಜಿದ ಮಾರ್ಕ್ ನ್ನು ಕಚ್ಚಾ ನಕಾಶೆಯಲ್ಲಿ ತೋರಿಸಿರುವುದಿಲ್ಲ. ಸದರಿ ಕಚ್ಚಾ ನಕಾಶೆಯಲ್ಲಿ ಅಕ್ಕಪಕ್ಕದಲ್ಲಿ ಇರವ ಕಟ್ಟಡವನ್ನು ತೋರಿಸಿರುವುದಿಲ್ಲ. ಗಂಧದಕೋಟೆಯ ರಸ್ತೆಯ ಮದ್ಯ ಭಾಗದಲ್ಲಿ

ಅಪಘಾತವಾಗಿರುತ್ತದೆ ಎಂದು ಬರೆದಿರುತ್ತಾರೆ. ಸದಿರಿ ಅಪಘಾತವು ಕುಶಾಲನಗರ ರಸ್ತೆ ಸುಂಟಿಕೊಪ್ಪ ರಸ್ತೆಯ ಮಧ್ಯ ಭಾಗದಲ್ಲಿ ಆಗಿರುತ್ತದೆ ಎಂದರೆ ಸರಿ . ಮಹಜರನಲ್ಲಿ ಕೃತ್ಯ ನಡೆದ ಸ್ಥಳದ ರಸ್ತೆಯ ಎಷ್ಟು ಅಡಿ ಉದ್ದ ಮತ್ತು ಅಗಲ ಇರುತ್ತದೆ ಎಂದು ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಅದೇ ರೀತಿ **2** ಭಾಗದ ಕಚ್ಚಾ ರಸ್ತೆಯ ಬಗ್ಗೆ ಬರದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ **1** ರಲ್ಲಿ ಕೃತ್ಯ ನಡೆದ ಸ್ಥಳದ ಚೆಕ್ಕುಬಂಧಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಅಪಘಾತಕ್ಕಿಡಾದ ಬೈಕಿನ ಇಂಡಿಕೇಟರ್ ಪೋಲಿಸರು ವಶಪಡಿಸಿಕೊಂಡಿರುವುದಿಲ್ಲ. ನಿಪಿ **1** ರಲ್ಲಿ ಅಕ್ಕಪಕ್ಕದ ಜಾಗ ಯಾರದ್ದು ಎಂದು ನಮೂದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

ನಾನು ಸ್ಥಳದಲ್ಲಿ **11.30** ಗಂಟೆ ಸಮಯದಿಂದ **12.30** ಗಂಟೆ ಸಮಯದವರೆಗೆ ಇದ್ದೆ. ಪೋಲಿಸರು ಅಕ್ಕಪಕ್ಕದವರನ್ನು ಕರೆದು ನಿಪಿ **1** ಕ್ಕೆ ಸಹಿ ಪಡೆದಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ ಬರೆದಿರುವುದಿಲ್ಲ ಹಾಗು ಆ ಸಮಯದಲ್ಲಿ ನಾನು ಸ್ಥಳದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನಟರಾಜುರವರು ಪರಿಚಯ ಇರುವುದಿಲ್ಲ. ನಾನು ಪೋಲಿಸರ ಕೋರಿಕೆಯ ನಿಪಿ **1** ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ **1** ಕ್ಕೆ ನಾನು ಸ್ಥಳದಲ್ಲಿ ಸಹಿ ಹಾಕಿರುತ್ತೇನೆ. ನಾನು ಪೋಲಿಸ್ ಠಾಣೆಯಲ್ಲಿ ಒಟ್ಟು **3** ಸಹಿಗಳನ್ನು ಮಾಡಿರುತ್ತೇನೆ. ಸದರಿ **3** ಸಹಿಗಳನ್ನು ಯಾವ ಯಾವುದಕ್ಕೆ ಹಾಕಿರುತ್ತೇನೆ ಎಂದು ನಿಖರವಾಗಿ ಗೊತ್ತಿಲ್ಲ. ನಾನು ಸ್ಥಳದಲ್ಲಿ **3** ಸಹಿ ಹಾಕಿರುತ್ತೇನೆ. ಸದರಿ ಸ್ಥಳದಲ್ಲಿ ಯಾವ ಯಾವ ವಿಚಾರಕ್ಕಾಗಿ ಸಹಿ ಹಾಕಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಹಾಗೂ ಪೋಲಿಸ್ ಠಾಣೆಯಲ್ಲಿ ಹಾಕಿದ ಒಟ್ಟು **6** ಸಹಿಗಳಿರುವ ದಾಖಾಲಾತಿಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋದಾಗ ಬೈಕು ಮತ್ತು ಕಾರ್ ಇರುವುದಿಲ್ಲ.

ಸ್ಥಳದಲ್ಲಿ ನಿಪಿ 1 ನ್ನು ಜರುಗಿಸಬೇಕಾದರೆ ಒಟ್ಟು 4 ಜನ ಪೋಲಿಸರು ಇರುತ್ತಾರೆ. ನಿಪಿ 1 ನ್ನು ಮಹಿಳಾ ಪೋಲಿಸರು ಬರೆದಿರುತ್ತಾರೆ. ನಿಪಿ 2 ರಲ್ಲಿ ನಿಖರವಾಗಿ ಏನೇನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 2 ಕ್ಕೆ ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿ . ಅಪಘಾತಕ್ಕಿಡಾದ ಮತ್ತು ಅಪಘಾತ ಪಡಿಸಿದ ವಾಹನಗಳಿಗೆ ಯಾವ ಯಾವ ಭಾಗದಲ್ಲಿ ಜಖಂಗೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೆ ಅಮಾನತ್ತು ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮಹಜರ ಕ್ರಮ ಜರುಗಿಸದ ಕಾರಣ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಕೋರಿಕೆಯ ಮೇರಗೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಮಾನತ್ತು ಪಂಚನಾಮೆಯಲ್ಲಿ ಅಪಘಾಕ್ಕಿಡಾದ ವಾಹನದ ಯಾವ ಯಾವ ಭಾಗ ಜಖಂಗೊಂಡಿದೆ ಮತ್ತು ಅಪಘಾತ ಪಡಿಸಿದ ವಾಹನದ ಯಾವ ಯಾವ ಭಾಗ ಜಖಂಗೊಂಡಿದೆ ಎಂದು ನಮೂದು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ನಿಖರವಾಗಿ ಏನು ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಏನು ವಿಚಾರ ತಿಳಿಯದೇ ಇದ್ದರೂ ಸಹ ಯಾವುದೆ ಮಹಜರಗೆ ಸಹಕರಿಸದೇ ಇದ್ದರೂ ಸಹ ಸುಳ್ಳು ಸಾಕ್ಯೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.